ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 4/2019 ಸಿಡಬ್ಲೂ: 10 ಪಿ ಡಬ್ಲೂ: 4**

| | |
|---|---|
| ಹೆಸರು | ಅಂಜನ್ ಕುಮಾರ್ |
| ತಂದೆಯ ಹೆಸರು | ನಾಗರಾಜು |
| ವಯಸ್ಸು | 36 ವರ್ಷ |
| ವೃತ್ತಿ | ಚಾಲಕ |
| ವಾಸ | ಬೆಂಗಳೂರು |

ದಿನಾಂಕಃ 24.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1ನೇ ಆರೋಪಿಯ ಪರಿಚಯವಿದ್ದು, ಆತ ನನ್ನ ಇನೋವಾ ಕಾರ್ ಸಂಖ್ಯೆಯಾದ ಕೆಎ-05-ಎಡಿ -8010 ರ ಚಾಲಕನಾಗಿದ್ದ. ಸದರಿ ಕಾರ್ ನನ್ನ ಮಾಲೀಕತ್ವದಲ್ಲಿತ್ತು. ದಿಃ 2201.2018 ರಂದು ಆತ ಕರ್ತವ್ಯದ ಮೇರೆಗೆ ಮೈಸೂರಿಗೆ ಬಂದಿದ್ದು, ಮೈಸೂರಿನಿಂದ ಬೆಂಗಳೂರಿನ ರಸ್ತೆಯಲ್ಲಿ ಬರುವಾಗ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ಶ್ರೀರಂಗಪಟ್ಟಣದಿಂದ ಸ್ವಲ್ಪ ಮುಂದೆ ಬರುವಾಗ ಒಂದು ದ್ವಿ ಚಕ್ರ ವಾಹನಕ್ಕೆ ತನ್ನ ಕಾರ್ ಟಚ್ ಆಗಿರುವುದಾಗಿ 1ನೇ ಆರೋಪಿ ತಿಳಿಸಿರುತ್ತಾರೆ. ಪೊಲೀಸರು ನನಗೆ ನೋಟೀಸ್ ನೀಡಿದ್ದು, ಆ ಪ್ರಕಾರವಾಗಿ ನಾನು ಶ್ರೀರಂಗಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆ ಹಾಜರಾಗಿ ಸೂಕ್ತ ದಾಖಲಾತಿಗಳನ್ನು ನೀಡಿ ನನ್ನ ಕಾರನ್ನು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿ ಕಲಂ 133ರ ಐ ಎಂ ವಿ ರೀತ್ಯಾ ನೋಟೀಸನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ನೋಟೀಸನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ

ಮರುಉತ್ತರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಇಂಡೆಮಿನಿಟಿ ಬಾಂಡ್ ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 3 ಅನ್ನು ನೋಡಿ ಅದು ತಾವು ಬಿಡಿಸಿಕೊಂಡ ಕಾರ್ ಆಗಿರುತ್ತದೆ ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲುಃ 1ನೇ ಆರೋಪಿ ಪರಃ ಶ್ರೀ ಎಂ ಎಸ್ ವಕೀಲರಿಂದಃ

ನಿಪಿ 7 ಅನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 7 ಅನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ6 ಅನ್ನು ನನಗೆ ಖುದ್ದು ಜಾರಿ ಮಾಡಿರುವುದಿಲ್ಲ, ನಾನು ಅದನ್ನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ 6 ಅನ್ನು ನಾನು ಓದಿ ಕೇಳಿ ಸಹಿ ಮಾಡಿರುವುದಿಲ್ಲ. ಅಪಘಾತವು ಯಾರ ತಪ್ಪಿ ನಿಂದ ಆಗಿದೆ ಹಾಗೂ ಹೇಗೆ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಿಲ್ಲ. ಸಾಕ್ಷಿ ಪುನಃ ನಾವು ಅದೇ ರಸ್ತೆಯಲ್ಲಿ ಬಂದಿದ್ದು, ಯಾವುದೇ ಗಾಡಿ ಇರದ ಕಾರಣ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*